**1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿಕ್ಕಮಗಳೂರು**

**ಸ್ಪೆಷಲ್ ಮೊಕದ್ದಮೆ ನಂಃ 24/2022**

| | | |
|---|---|---|
| ಸಾಕ್ಷಿದಾರರ ಹೆಸರು | - ರಂಗನಾಥನ್ | ಪಿಡಬ್ಲೂ - 15 |
| ತಂದೆಯ ಹೆಸರು | - ರಾಮನುಜ | ಸಿಡಬ್ಲೂ -34 |
| ವಯಸ್ಸು | - 54 ವರ್ಷ | |
| ಉದ್ಯೋಗ | - ಎ.ಎಸ್.ಐ., ಬಣಕಲ್ ಪೊಲೀಸ್ ಠಾಣೆ | |
| ವಾಸ ಸ್ಥಳ | - ಬಣಕಲ್ | |

(ಆರೋಪಿಯು ನ್ಯಾಯಾಂಗ ಬಂಧನದಲ್ಲಿದ್ದು, ಆತನನ್ನು ಈ ದಿನ ***Google meet*** ನಲ್ಲಿ ವೀಡಿಯೋ ಕಾನ್ಫರೆನ್ಸಿಂಗ್ ಮುಖಾಂತರ ಕಾರಾಗೃಹದಿಂದ ಹಾಜರುಪಡಿಸಲಾಗಿರುತ್ತದೆ. ಸಾಕ್ಷಿಯ ವಿಚಾರಣೆಯನ್ನು ದಾಖಲಿಸುವ ಮೊದಲು ಆರೋಪಿಗೆ ಸಾಕ್ಷಿ ಮಾತನಾಡುವುದು ಸರಿಯಾಗಿ ಕೇಳಿಸುತ್ತಿದೆ ಮತ್ತು ವಿಡಿಯೋ ಕಾನ್ಫರೆನ್ಸಿಂಗ್ ಮುಖಾಂತರ ಸಾಕ್ಷಿಯ ವಿಚಾರಣೆಯನ್ನು ದಾಖಲಿಸಲು ಯಾವುದೇ ತಾಂತ್ರಿಕ ಸಮಸ್ಯೆ ಇಲ್ಲವೆಂದು ಖಾತ್ರಿಪಡಿಸಿಕೊಳ್ಳಲಾಯಿತು.)

ದಿನಾಂಕಃ 06-02-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ-

1. ನಾನು 2019 ರಿಂದ 2023 ರವರೆಗೆ ಚಿಕ್ಕಮಗಳೂರಿನ ಸಿ.ಇ.ಎನ್. ಪೊಲೀಸ್ ಠಾಣೆಯಲ್ಲಿ ಮುಖ್ಯ ಪೇದೆ 132 ಆಗಿ ಕರ್ತವ್ಯ ನಿರ್ವಹಿಸಿದ್ದೇನೆ ಮತ್ತು ಆ ಸಮಯದಲ್ಲಿ ಚಿಕ್ಕಮಗಳೂರು ಡಿ.ವೈ.ಎಸ್.ಪಿ. ರವರ ಕಛೇರಿಯಲ್ಲಿ ಒಒಡಿ ಆಧಾರದ ಮೇರೆಗೆ ತನಿಖಾ ಸಹಾಯಕನಾಗಿ ಕಾರ್ಯ ನಿರ್ವಹಿಸಿದ್ದೇನೆ.

2. ಚಿಕ್ಕಮಗಳೂರು ಗ್ರಾಮಾಂತರ ಪೊಲೀಸ್ ಠಾಣೆ ಮೊಕದ್ದಮೆ ಸಂಃ 352/2021 ರ ತನಿಖಾಧಿಕಾರಿಗಳಾಗಿದ್ದ ಚಾಸಾ.40 ರವರು ದಿಃ 12-02-2022 ರಂದು ಸಾಕ್ಷಿದಾರರ ಹೇಳಿಕೆಗಳನ್ನು ದಾಖಲಿಸಿದ್ದು ಆ ಸಮಯದಲ್ಲಿ ನಾನು ಅವರ ಸೂಚನೆಯ ಮೇರೆಗೆ ಪೊಲೀಸ್ ಇಲಾಖೆಯಿಂದ ಡಿ.ವೈ.ಎಸ್.ಪಿ. ಕಛೇರಿಗೆ ಒದಗಿಸಲಾಗಿದ್ದ ಸೋನಿ ಡಿಜಿಟಲ್ ಹ್ಯಾಂಡಿಕ್ಯಾಮೆರದಲ್ಲಿ ಆಡಿಯೋ ಮತ್ತು ವಿಡಿಯೋ ಚಿತ್ರಿಕರಿಸಿದ್ದೇನೆ.

3. ನಂತರ ತನಿಖಾಧಿಕಾರಿಗಳ ಮೌಖಿಕ ಆದೇಶದ ಮೇರೆಗೆ ಸದರಿ ವಿಡಿಯೋಗಳನ್ನು ಕ್ಯಾಮೆರದಿಂದ ಡೇಟಾ ಕೇಬಲ್ ಮುಖಾಂತರ ಕಛೇರಿಗೆ ಒದಗಿಸಲಾಗಿದ್ದ SDPO/CKM/004/CKM ಕಂಪ್ಯೂಟರಿಗೆ ಯಥಾಸ್ಥಿತಿಯಲ್ಲಿ ವರ್ಗಾಯಿಸಿದ್ದೇನೆ. ನಂತರ ಅವುಗಳನ್ನು ತನಿಖಾಧಿಕಾರಿಗಳ ಸೂಚನೆಯ ಮೇರೆಗೆ ಸದರಿ ವಿಡಿಯೋಗಳನ್ನು 4.7 ಜಿಬಿ ಸಾಮರ್ಥ್ಯವುಳ್ಳ ಸೋನಿ ಕಂಪನಿಯ ಡಿವಿಡಿಗೆ ಯಥಾಸ್ಥಿತಿಯಲ್ಲಿ ವರ್ಗಾಯಿಸಿದ್ದೇನೆ. ಸದರಿ ವಿಡಿಯೋಗಳನ್ನು ತೆಗೆದ ಕ್ಯಾಮೆರ, ಅವುಗಳನ್ನು ಮೇಲೆ ಹೇಳಿದಂತೆ ವರ್ಗಾಯಿಸಿದ ಕಂಪ್ಯೂಟರ್ ಮತ್ತು ಡಿವಿಡಿಗಳು ಸುಸ್ಥಿತಿಯಲ್ಲಿ ಇದ್ದವು. ಸದರಿ ಡಿವಿಡಿಯನ್ನು ಮತ್ತು ಅದರಲ್ಲಿರುವ ವಿಡಿಯೋಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಒಂದು ಸೋನಿ ಕಂಪನಿಯ ಡಿವಿಡಿಯನ್ನು ನೋಡಿ ಗುರುತಿಸಿದ ಮೇರೆಗೆ ಅದನ್ನು ನಿಪಿ.36 ಎಂದು ಗುರುತಿಸಲಾಯಿತು. ಸದರಿ ಡಿವಿಡಿಯನ್ನು ತಂತ್ರಜ್ಞರ ಸಹಾಯದಿಂದ ವಿಶೇಷ ಸರ್ಕಾರಿ ಅಭಿಯೋಜಕರು, ಆರೋಪಿ ಮತ್ತು ಆತನ ಪರ ವಕೀಲರ ಸಮಕ್ಷಮ ನ್ಯಾಯಾಲಯದ ಕಂಪ್ಯೂಟರಿಗೆ ಅಳವಡಿಸಿ ಪ್ಲೇ ಮಾಡಿ ತೋರಿಸಲಾಗಿ ಅದರಲ್ಲಿರುವ 6

ವಿಡಿಯೋಗಳನ್ನು ಸಾಕ್ಷಿ ನೋಡಿ ಗುರುತಿಸಿ ನಾನು ಮೇಲೆ ಹೇಳಿದಂತೆ ಚಾಸಾ.40 ರವರ ಆದೇಶದ ಮೇರೆಗೆ ಅವರು 6 ಸಾಕ್ಷಿದಾರರ ಹೇಳಿಕೆಗಳನ್ನು ದಾಖಲಿಸುವ ಕಾಲಕ್ಕೆ ಚಿತ್ರಿಕರಿಸಿದ 6 ವಿಡಿಯೋಗಳು ಅವೇ ಎಂದು ನುಡಿದಿರುತ್ತಾರೆ.

4. ನಂತರ ಆ ಬಗ್ಗೆ ಅದೇ ದಿನ ಅಂದರೆ ದಿನಾಂಕ 12-02-2022 ರಂದು ನಾನು ಚಾಸಾ.40 ರವರಿಗೆ ಭಾರತೀಯ ಸಾಕ್ಷ್ಯ ಅಧಿನಿಯಮ 65 ಬಿ ರಡಿಯಲ್ಲಿ ದೃಢೀಕರಣ ಪತ್ರವನ್ನು ನೀಡಿರುತ್ತೇನೆ. ಸದರಿ ದೃಢೀಕರಣ ಪತ್ರವನ್ನು ಮತ್ತು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ದೃಢೀಕರಸಣ ಪತ್ರವನ್ನು ನಿಪಿ.37 ಎಂದು ಮತ್ತು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.37(ಎ) ಎಂದು ಗುರುತಿಸಲಾಯಿತು.

5. ನನಗೆ ಡಿಜಿಟಲ್ ಕ್ಯಾಮೆರದಲ್ಲಿ ಆಡಿಯೋ ಮತ್ತು ವಿಡಿಯೋ ಚಿತ್ರಿಕರಿಸಲು ಮತ್ತು ಅವುಗಳನ್ನು ಕಂಪ್ಯೂಟರಿಗೆ ಮತ್ತು ಕಂಪ್ಯೂಟರಿನಿಂದ ಡಿವಿಡಿಗೆ ವರ್ಗಾಯಿಸುವ ಬಗ್ಗೆ ಪರಿಣಿತಿ ಇರುತ್ತದೆ. ಇಲಾಖಾ ವತಿಯಿಂದ ನನಗೆ ಕಂಪ್ಯೂಟರ್ ಬಗ್ಗೆ ತರಬೇತಿಯನ್ನು ನೀಡಲಾಗಿರುತ್ತದೆ ಮತ್ತು ನಾನು ಕಂಪ್ಯೂಟರ್ ಲಿಟರೆಸಿ ಟೆಸ್ಟ್ ನಲ್ಲಿ ತೇರ್ಗಡೆ ಹೊಂದಿರುತ್ತೇನೆ.

ಪಾಟೀ ಸವಾಲುಃ ಆರೋಪಿಯ ಪರವಾಗಿ ಶ್ರೀ ಪಿ.ಇ.ಎಸ್ ವಕೀಲರ ಪರವಾಗಿ ಶ್ರೀ ಎಂ.ಸಿ.ಪಿ. ವಕೀಲರು ತಮ್ಮ ಸೀನಿಯರ್ ವಕೀಲರು ಬೆಂಗಳೂರಿಗೆ ಹೋಗಿದ್ದಾರೆ ಎಂದು ನುಡಿದು ಸಾಕ್ಷಿಯ ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಸಾಕ್ಷಿಯ ಪಾಟೀ

ಸವಾಲನ್ನು ಮುಂದೂಡಲಾಯಿತು.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು )

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
1 ನೇ ಹೆಚ್ಚುವರಿ ವಿಶೇಷ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ